ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು

ಆ) 861 ಫಲಾನುಭವಿಗಳಿಗೆ ಹಕ್ಕುಪತ್ರ ನೀಡುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಶಿವಮೊಗ್ಗ ನಗರಸಭೆಯಿಂದ ಕೆಲವು ಮಾಹಿತಿಗಳನ್ನು ಕೋರಲಾಗಿದ್ದು, ಮಾಹಿತಿ ಪಡೆದ ನಂತರ ಪ್ರಸ್ತಾವನೆಯನ್ನು ಪರಿಶೀಲಿಸಲು ಕ್ರಮ ಕೈಗೊಳ್ಳಲಾಗುವುದು.

ಬಿ.ಡಿ.ಎ. ಸ್ವತ್ತಿನಲ್ಲಿರುವ ಅಕ್ರಮ ಕಟ್ಟಡಗಳು

1580 (1871) ಶ್ರೀ ಚನ್ನಿಗಪ್ಪ ಸಿ (ಕೊರಟಗೆರೆ) : ಮಾನ್ಯ ಮುಖ್ಯಮಂತ್ರಿಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಸ್ವತ್ತಿನಲ್ಲಿರುವ ಅಕ್ರಮ ಕಟ್ಟಡಗಳನ್ನು ನೆಲಸಮ ಮಾಡಿ ಸ್ವತ್ತನ್ನು ಬಿಡಿಎ ವಶಕ್ಕೆ ತೆಗೆದುಕೊಳ್ಳುತ್ತಿರುವುದು ನಿಜವೇ;

ಆ) ಬಿಡಿಎ ನ ಎಷ್ಟು ಸ್ವತ್ತಿನಲ್ಲಿ ಅಕ್ರಮ ಕಟ್ಟಡಗಳಿವೆ ಎಷ್ಟು ಸ್ವತ್ತಿನಲ್ಲಿ ಸ್ಲಂ ಆಗಿವೆ. ನ್ಯಾಯಾಲಯದಲ್ಲಿ ಬಾಕಿ ಇರುವ ಜಮೀನುಗಳ ವಿವರ, ಖಾಸಗಿ ಗೃಹ ನಿರ್ಮಾಣ ಸಂಘದವರು ಒತ್ತುವರಿ ಮಾಡಿಕೊಂಡ ಜಮೀನುಗಳ ವಿವರಗಳನ್ನು ಗ್ರಾಮವಾರು ಸರ್ವೆ ನಂಬರುವಾರು, ಎಕರೆವಾರು ನೀಡುವುದು ನ್ಯಾಯಾಲಯದಲ್ಲಿರುವ ಪ್ರಕರಣಗಳು ಯಾವ ಹಂತದಲ್ಲಿವೆ;

ಇ) ಈ ಎಲ್ಲಾ ಅಕ್ರಮ ಸ್ವತ್ತುಗಳನ್ನು ತೆರವುಗೊಳಿಸಿದರೆ ಸರ್ಕಾರಕ್ಕೆ ಬರುವ ಆದಾಯವೆಷ್ಟು, ನಿವೇಶನಗಳಾಗಿ ವಿಂಗಡಿಸಿದರೆ ಎಷ್ಟು ನಿವೇಶನಗಳಾಗುತ್ತವೆ, ಮತ್ತು ಬರುವ ಆದಾಯವೆಷ್ಟು;

ಈ) ಸ್ಲಂ ನೆಪದಲ್ಲಿ ಕಬಳಿಕೆ ಆಗುತ್ತಿರುವ ಸ್ವತ್ತಿನ ಬಗ್ಗೆ ಸರ್ಕಾರದ ನಿಲುವೇನು? ಭೂ ಕಬಳಿಕೆಯಾಗಿರುವ ಜಮೀನಿನಲ್ಲಿ ಖಾಲಿ ಸ್ವತ್ತನ್ನು ಈಗಲಾದರೂ ಸರ್ಕಾರದ ವಶಕ್ಕೆ ಪಡೆದುಕೊಳ್ಳಲಾಗುವುದೇ, ಎಷ್ಟು ಬೆಲೆ ಬಾಳುತ್ತದೆ? (ವಿವರ ಒದಗಿಸುವುದು)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿ ಬರುವ ಅಕ್ರಮ ಕಟ್ಟಡಗಳನ್ನು ಸಮೀಕ್ಷೆ ಮಾಡಿರುವುದಿಲ್ಲ. ಆದಾಗ್ಯೂ ಕಳೆದ ಮೂರು ವರ್ಷಗಳಿಂದ ಪ್ರಾಧಿಕಾರವು 732 ಅನಧಿಕೃತ ಕಟ್ಟಡಗಳನ್ನು ಧ್ವಂಸಗೊಳಿಸಿ ಸುಮಾರು 311 ಕೋಟಿ ರೂ.ಗಳ ಆಸ್ತಿಯನ್ನು ತನ್ನ ವಶಕ್ಕೆ ಪಡೆದಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿದ್ದ ಕೊಳಚೆ ಪ್ರದೇಶಗಳನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯವರಿಗೆ ಹಸ್ತಾಂತರಿಸಲಾಗಿದೆ. ಬೇರೆ ಬೇರೆ ನ್ಯಾಯಾಲಯಗಳಲ್ಲಿ ದಿ 30.6.2002ರವರೆಗೆ 5459 ಮೊಕದ್ದಮೆಗಳು ಬಾಕಿ ಇರುತ್ತವೆ, ಮತ್ತು ವಿವಿಧ ಹಂತದಲ್ಲಿರುತ್ತವೆ. ಖಾಸಗಿ ಗೃಹ ನಿರ್ಮಾಣ ಸಂಘಗಳು ಒತ್ತುವರಿ ಮಾಡಿಕೊಂಡ ಜಮೀನಿನ ಬಗ್ಗೆ ಪ್ರಾಧಿಕಾರವು ಸಮೀಕ್ಷೆ ಮಾಡಿರುವುದಿಲ್ಲ.

ಇ) ಸಮೀಕ್ಷೆ ಮಾಡದಿರುವುದರಿಂದ ಅನ್ವಯಿಸುವುದಿಲ್ಲ.

ಈ) ಪ್ರಾಧಿಕಾರದ ಜಮೀನಿನಲ್ಲಿ ಯಾವುದೇ ಕೊಳಚೆ ಪ್ರದೇಶಗಳು ಬರುವುದಕ್ಕೆ ಅವಕಾಶ ಕೊಡುತ್ತಿಲ್ಲ. ಯಾವುದೇ ಖಾಲಿ ಜಾಗವಿದ್ದಲ್ಲಿ ಪ್ರಾಧಿಕಾರವು ತನ್ನ ವಶಕ್ಕೆ ತೆಗೆದುಕೊಂಡು ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.